

# ನಿಸರ್ಗದ ಕೊಡುಗೆ ಕವಡೆ

**ಆಟಕ್ಕೆ ಬಳಕೆಯಾಗುವ ಕವಡೆಗಳು ಅನೇಕರ ಬದುಕಿಗೆ ಸಂಪಾದನೆಯ ದಾರಿಯೂ ಆಗಿವೆ. ಅಲಂಕಾರ ಸಾಮಗ್ರಿಗಳಾಗಿ ಕವಡೆಗಳನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ.**

■ ಸುಮಾವೀಣಾ

ಕಡಲ ತಡಿಯ ಜನರು ಕವಡೆಗಳಲ್ಲಿ ಓಲೆ, ನೆಕ್ಲೇಸ್, ಬ್ರೇಸ್ಲೆಟ್, ಬಳೆ, ಉಂಗುರ ಮೊದಲಾದ ಕೃತಕ ಒಡವೆಗಳನ್ನು ಹಲವು ಆಕರ್ಷಕ ವಿನ್ಯಾಸಗಳಲ್ಲಿ ತಯಾರಿಸಿ ಮಾರಾಟ ಮಾಡುತ್ತಾ ಜೀವನೋಪಾಯ ಕಂಡುಕೊಂಡಿದ್ದಾರೆ. ಇದು ವೃತ್ತಿ–ಪ್ರವೃತ್ತಿಯಾಗಿಯೂ ಕೆಲವರನ್ನು ಕೈಹಿಡಿದಿದೆ. ಟ್ರೆಂಡಿ ಆಭರಣ ತಯಾರಿಕಾ ಕಂಪನಿಗಳು ಕವಡೆಗಳಿಂದ ಸಿದ್ಧ ಪಡಿಸಿದ ಓಲೆ, ಉಂಗುರಗಳನ್ನು ಸಿದ್ಧಪಡಿಸಿ ಫ್ಯಾಷನ್‌ಪ್ರಿಯರನ್ನು ಸೆಳೆಯುತ್ತಿದ್ದಾರೆ.

‘ಕವಡೆ ಕಾಸಿಗೆ ಕಿಮ್ಮತ್ತಿಲ್ಲ’ ಎಂಬುದು ಜನಪ್ರಿಯ ಮಾತು. ಆದರೆ ಈಗ ಕವಡೆಗೂ ಕಿಮ್ಮತ್ತು ಬಂದಿದೆ. ಸುಕುಮಾರ ಶಾಂತಿನಾಥನ ಚರಿತೆಯಲ್ಲಿ ‘ಇಂತೊಂದು ಕೋಟಿ ಪೊನ್ನನೊಂದು ಕವಡಿಕೆಯಂ ಕುಡುವಂಥೇನುಂ ಅಪೋಹಮಿಲ್ಲದೆ ಕೊಟ್ಟು’ ಎಂಬ ವಾಕ್ಯದಲ್ಲಿ ಕವಡಿಕೆ ನಾಣ್ಯದ ರೂಪದಲ್ಲಿ ಬಳಕೆಯಾಗುತ್ತಿತ್ತು ಎನ್ನುತ್ತಾರೆ. ‘ಕವಡಿಕೆಯಂ ಕಾಚುಂ ಸಲ್ಲಗುಮೆ ಹೊನ್ನವೊಲೆಲ್ಲಿಯಾದೊಡಂ’ ಎಂಬ ಮಾತಿನಲ್ಲಿ ಕವಡೆಗಿದ್ದ ಮಹತ್ವ ವ್ಯಕ್ತವಾಗುತ್ತದೆ.



## ಮೃದ್ವಂಗಿಗಳ ಪ್ರಭೇದ

ಕವಡೆಗಳು ಕಡಲ ಮೃದ್ವಂಗಿಗಳ ಪ್ರಭೇದ. ಶಂಖದಂತೆ ಹೊರಕವಚ ಮಾತ್ರ ಹೊಂದಿರುತ್ತದೆ. ಇದರಲ್ಲಿರುವ ಜೀವಿ ಬಹಳ ಮೃದುವಾಗಿರುತ್ತದೆ. ಆದ ಕಾರಣ ತನ್ನ ಸಂರಕ್ಷಣೆಗೆ ಗಟ್ಟಿಯಾದ ಹೊದಿಕೆ ಹೊಂದಿರುತ್ತದೆ. ಇದೇ ಜಾತಿಗೆ ಸೇರಿದ ಕಪ್ಪೆಚಿಪ್ಪನ್ನು ದಶಕಗಳ ಹಿಂದೆ ಮನೆಗೆ ಸುಣ್ಣ ಬಳಿಯಲು ಬಳಸುತ್ತಿದ್ದರು.



‘ಕಪರ್ದಿಕಾ’ ಒಂದು ನಿಶಾಚರ ಪ್ರಾಣಿ. ರಾತ್ರಿಯಾದೊಡನೆ ಬೇಟೆಗೆ ಇಳಿಯುತ್ತದೆ. ಇದರ ಆವಾಸಸ್ಥಾನ ಕಡಲೇ ಆಗಿರುತ್ತದೆ. ಸುಂದರ, ಬೆಲೆಬಾಳುವ ಕವಡೆಗಳು ಸಿಗಬೇಕಾದರೆ ಕಡಲಾಳಕ್ಕೇ ಇಳಿಯಬೇಕಾಗುತ್ತದೆ. ಇವುಗಳಲ್ಲಿ 165ಕ್ಕೂ ಮಿಕ್ಕಿ ಪ್ರಭೇದಗಳಿವೆ. ಉದ್ದ, ಆಕಾರ, ಬೆನ್ನ ಬಣ್ಣ ನೋಡಿ ಇವುಗಳ ಪ್ರಭೇದಗಳನ್ನು ಕಂಡು ಹಿಡಿಯುತ್ತಾರೆ. ಕವಡೆ ಮುಖ್ಯವಾಗಿ ಐದು ಬಣ್ಣಗಳಲ್ಲಿ ಇರುತ್ತದೆ. ಅವುಗಳಲ್ಲಿ ‘ಸಿಂಹ ಕವಡೆ’ಯು ಸುವರ್ಣಛಾಯೆ ಹೊಂದಿರುತ್ತದೆ. ಧೂಮ್ರವರ್ಣದಲ್ಲಿ ‘ವ್ಯಾಘ್ರ ಕವಡೆ’, ಹಳದಿ ಬಣ್ಣದಲ್ಲಿ ‘ಮೃಗಿ ಕವಡೆ’, ಬಿಳಿಯ ಬಣ್ಣದಲ್ಲಿರುವುದನ್ನು ‘ಹಂಸಿ ಕವಡೆ’ ಎನ್ನುತ್ತಾರೆ. ಉದ್ದವಾದ ಕವಡೆಯನ್ನು ‘ವಿದಂತ’ ಎನ್ನುತ್ತಾರೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ಕವಡೆಯ ಉಲ್ಲೇಖವಿದೆ. ಬ್ರಹ್ಮಶಿವನ ‘ಸಮಯ ಪರೀಕ್ಷೆಯಲ್ಲಿ’ಯೂ ಕವಡೆಯ ಪ್ರಸ್ತಾಪವಿದೆ. ಉರಿಲಿಂಗಪೆದ್ದಿ ಎಂಬ ವಚನಕಾರ ವಚನವೊಂದರಲ್ಲಿ ‘ಮಾಯೀರಾಣಿಯೇ ದೈವವೆಂದಾರಾಧಿಸಿಧಾತನು ಕೊರಳಿಗೆ ಕವಡೆಯ ಕಟ್ಟಿ ತಲೆಯಲ್ಲಿ ಕೆರಹ ಹೊತ್ತು ಬೇವಿನ ಸೊಪ್ಪನ್ನುಟ್ಟು ಲಜ್ಜೆಯ ನೀಗಿದ’ ಎಂಬ ಮಾತನ್ನು ಉಲ್ಲೇಖಿಸುತ್ತಾನೆ. ಅಲಗುಳಿಮಣೆ ಆಡುವಾಗ ಚೌಕಾಬಾರ ಆಟದಲ್ಲಿ ಕವಡಿಕೆಯನ್ನು ಗರ ಹಾಕಲು ಬಳಸುತ್ತಾರೆ.

ಶಾಸ್ತ್ರ, ಪಂಚಾಂಗ ನೋಡುವ ಸಂದರ್ಭದಲ್ಲಿ, ಕೊರವಂಜಿ ಕಣಿ ಕೇಳುವ ಸಂದರ್ಭದಲ್ಲಿ (ಇತ್ತೀಚೆಗೆ ಕೊರವಂಜಿಗಳು, ಕಣಿ ಹೇಳುವುದೆಲ್ಲಾ ನೇಪಥ್ಯಕ್ಕೆ ಸರಿದಿದೆ. ಕೇವಲ ದಾಖಲೆಗಳಲ್ಲಿ, ಹಾಳೆಗಳಲ್ಲಿ ಚಿತ್ರಗಳಲ್ಲಿ ನೋಡುವಂತಾಗಿದೆ) ಕವಡೆ ಹಾಕುವ ಪದ್ಧತಿ ಈಗಲೂ ಇದೆ. ಸಮ ಬೆಸ ಸಂಖ್ಯೆಗಳ ಆಧಾರದ ಮೇಲೆ ಸಮಸ್ಯೆಗಳನ್ನು ಊಹಿಸಿ ಪರಿಹಾರ ಸೂಚಿಸುತ್ತಾರೆ. ಇದು ಅವರವರ ನಂಬಿಕೆಗೆ ಬಿಟ್ಟ ವಿಚಾರ. ‘ಕಂದಮ್ಮಗಳ ಕಣ್ಣಿನ ಕವಡಿಯ ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ, ಬೇಂದ್ರೆಯವರ ‘ಕುರುಡು ಕಾಂಚಾಣ’ ಪದ್ಯದಲ್ಲಿಯೂ ಇದು ಉಲ್ಲೇಖವಾಗಿದೆ.

ಕವಡೆಯನ್ನು ಆರೋಗ್ಯವರ್ಧಕ ಎನ್ನುವುದಿದೆ. ಹಾಗಾಗಿ ಆದಿವಾಸಿಗಳಲ್ಲಿ ಮಗು ಹುಟ್ಟಿದೊಡನೆ ಕವಡೆಗೆ ರಂಧ್ರಮಾಡಿ ಕೊರಳಿಗೆ ಹಾಕುವುದು, ಎತ್ತುಗಳಿಗೆ ಕಪ್ಪು ಹಗ್ಗದೊಂದಿಗೆ ಕವಡೆ ಕಟ್ಟುವುದಿದೆ. ಇತ್ತೀಚೆಗೆ ವಾಹನಗಳಲ್ಲಿಯೂ ಬಳಸುವಂತೆ ಕವಡೆಯಿಂದ ತಯಾರಾದ ವಸ್ತುಗಳು ದೊರಕುತ್ತಿವೆ. ಸೌಂದರ್ಯ, ಪರಂಪರೆ, ವಸ್ತ್ರ ವಿನ್ಯಾಸಗಳಲ್ಲಿ ಬೆಲೆಯನ್ನು ಗಿಟ್ಟಿಸಿಕೊಂಡಿರುವ ಕವಡೆ ನೈಸರ್ಗಿಕ ಸಂಪತ್ತೇ ಸರಿ!

ಪ್ರತಿಕ್ರಿಯಿಸಿ: feedback@sudha.co.in